**ದಿನಾಂಕಃ 31.10.2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು : 2 ರಿಂದ 5 ನೇ ಪ್ರತಿವಾದಿಗಳ ಪರ ವಕೀಲರಿಂದಃ**

5. ಸರ್ವೇ ನಂ. 323 ರಲ್ಲಿ 9 ಎಕರೆ, ಸರ್ವೇ ನಂ. 322 ರಲ್ಲಿ 1 ಎಕರೆ ಮತ್ತು ಸ. ನಂ.175/ಎ ರಲ್ಲಿ 2 ಎಕರೆ 80 ಸೆಂಟ್ಸ್ ಮುದುಕಪ್ಪನ ಹಿಸ್ಸೆಗೆ ಬಂದಿರುವ ಆಸ್ತಿಗಳು ಎಂದರೆ ಸರಿಯಲ್ಲ. ಉಪ್ಪಾರ ಮುದುಕಪ್ಪ ಸದರಿ ಜಮೀನುಗಳಲ್ಲಿ ಸ. ನಂ. 323 ರಲ್ಲಿ 9 ಎಕರೆ ಮತ್ತು ಸ. ನಂ. 322 ರಲ್ಲಿ 1 ಎಕರೆ ಸೇರಿಸಿ ಒಟ್ಟು 10 ಎಕರೆಯನ್ನು ದಿನಾಂಕ 29.05.1941 ರ ಕ್ರಯ ಪತ್ರದ ಮೂಲಕ ರೂ. 300/- ಗಳಿಗೆ ಐರಾಣಿ ವೀರಭದ್ರಪ್ಪನಿಗೆ ಕ್ರಯ ಮಾಡಿದ್ದಾರೆ ಎಂದರೆ ಕ್ರಯ ಪತ್ರದಲ್ಲಿ ಮೋಸವಾಗಿರುತ್ತದೆ. ಸದರಿ ಕ್ರಯ ಪತ್ರವನ್ನು ನಿಪಿ 20 ರಂತೆ ನಾನೇ ಹಾಜರು ಮಾಡಿದ್ದೇನೆ ಎಂದರೆ ಸರಿ. ಉಪ್ಪಾರ ಮುದುಕಪ್ಪ ತಾನು ಐರಾಣಿ ಕಲ್ಲಪ್ಪನ ಹತ್ತಿರ ಮಾಡಿಕೊಂಡಿದ್ದ ಸಾಲಗಳನ್ನು ತೀರುವಳಿ ಮಾಡಲು ಈ ಜಮೀನುಗಳನ್ನು ಮಾರಾಟ ಮಾಡಿದ್ದರು ಎಂದರೆ ಸರಿಯಲ್ಲ. ಸದರಿ ಕ್ರಯ ಪತ್ರದಲ್ಲೇ ಉಪ್ಪಾರ ಮುದುಕಪ್ಪ ಆ ಜಮೀನುಗಳು ತನಗೆ ಪಾಲುವಿಭಾಗದಲ್ಲಿ ಬಂದಿದ್ದವು ಎಂದು ಬರೆಯಿಸಿದ್ದಾರೆ ಎಂದರೆ ಆ ದಾಖಲೆ ಫ್ರಾಡ್ ಇರುತ್ತದೆ. ಸದರಿ ಕ್ರಯ ಪತ್ರ ಸೃಷ್ಟಿಸಿದ ಅಥವಾ ವಂಚನೆಯಿಂದ ಮಾಡಿದ ಕ್ರಯ ಪತ್ರವೆಂದು ಉಪ್ಪಾರ ಮುದುಕಪ್ಪ ತನ್ನ ಜೀವಿತಾವಧಿಯಲ್ಲಿ ಮತ್ತು ಆತನ ಮಗ ಚೌಡಪ್ಪ ಯಾವತ್ತೂ ಪ್ರಶ್ನೆ ಮಾಡಿಲ್ಲ ಎಂದರೆ ಸರಿ. ಉಪ್ಪಾರ ಮುದುಕಪ್ಪನಿಂದ ಕ್ರಯ ಪತ್ರ ಪಡೆದುಕೊಂಡ ಐರಾಣಿ ವೀರಭದ್ರಪ್ಪ ಐರಾಣಿ ಪರಪ್ಪನ ಮಗ ಎಂದರೆ ಸರಿ ಎಂದು ಹೇಳಿ ನಂತರ ಅಲ್ಲವೆಂದು ಹೇಳಿದ್ದಾರೆ. ವಾದ ಪತ್ರದಲ್ಲಿ ಐರಾಣಿ ಕಲ್ಲಪ್ಪನ ಮಗ ವೀರಭದ್ರಪ್ಪನಿಗೆ 3 ಜನ ಸೇರಿ ಕ್ರಯ ಪತ್ರ ಬರೆದು ಕೊಟ್ಟಿದ್ದಾರೆ ಎಂದು ಬರೆಯಿಸಿರುವ ಸಂಗತಿ ಸುಳ್ಳು ಎಂದರೆ ಸರಿಯಲ್ಲ. ನನ್ನ ನಿಪಿ 20 ರಲ್ಲಿ ಮಲ್ಲಪ್ಪನ 3 ಜನ ಮಕ್ಕಳು ಕ್ರಯ ಪತ್ರ ಬರೆದುಕೊಟ್ಟಿದ್ದಾರೆಂದು ಎಲ್ಲಿಯೂ ಉಲ್ಲೇಖವಾಗಿಲ್ಲ ಎಂದರೆ ಸರಿಯಲ್ಲ. 1941 ರ ಕ್ರಯ ಪತ್ರಕ್ಕೆ ಸಂಬಂಧಿಸಿದ ರುಣಭಾರ ಪ್ರಮಾಣ ಪತ್ರವನ್ನು ನಾನು ನಿಪಿ21 ಎಂದು ಗುರುತಿಸಿಕೊಂಡಿದ್ದೇನೆ ಎಂದರೆ ಸರಿ. ನಿಪಿ 21 ರಲ್ಲಿ ಯಾರು ಯಾರಿಗೆ ಮಾರಾಟ ಮಾಡಿದ್ದಾರೆಂದು ನಮೂದಾಗಿದೆ? ಎಂದರೆ ಸಾಕ್ಷಿಯು ಸರಿಯಲ್ಲ ಎಂದು ಹೇಳಿದ್ದಾರೆ ಅವರ ವಕೀಲರು ಸುಮಾರು 70 ದಾಖಲೆಗಳನ್ನು ಗುರುತಿಸಿಕೊಂಡಿರುವ ಕಾರಣ ದಾಖಲೆ ತೋರಿಸಿ ಕೇಳಿ ಎಂದು ಹೇಳಿದ್ದಾರೆ. ನಿಪಿ 20 ಕ್ರಯ ಪತ್ರದಲ್ಲಿ ಅದಕ್ಕೆ ಸಣ್ಣ ಗುಂಡಪ್ಪ ಮತ್ತು ದೊಡ್ಡ ಗುಂಡಪ್ಪ ಒಪ್ಪಿಗೆ ಸಹಿ ಮಾಡಿದ ಬಗ್ಗೆ ನಮೂದಾಗಿದೆಯೇ? ಎಂದರೆ ಇಲ್ಲ. ನಾನು ಹೇಳುತ್ತೇನೆ, ನಮ್ಮ ವಂಶದಲ್ಲಿ ಗುಂಡಪ್ಪ , ಮುದುಕಪ್ಪ ಮತ್ತು ತಿಪ್ಪಣ್ಣ ಎನ್ನುವವರು ಮಾತ್ರ ಇರುತ್ತಾರೆ.

6. ಸಾಕ್ಷಿಗೆ ನಿಪಿ 19 ನ್ನು ತೋರಿಸಿ ಈ ದಾಖಲೆ ಪ್ರಕಾರ ದಿನಾಂಕ 31.07.1931 ರಂದು ಸರ್ವೇ ನಂ. 323 ರಲ್ಲಿ 20.97 ಎಕರೆ ಮತ್ತು ಸ. ನಂ. 322 ರಲ್ಲಿ 2.96 ಎಕರೆ ಜಮೀನನ್ನು 936 ರೂ. ಗಳಿಗೆ ಗುಂಡಪ್ಪ, ತಿಪ್ಪಣ್ಣ ಮತ್ತು ಮುದುಕಪ್ಪ ಅಡಮಾನ ಮಾಡಿದ ಬಗ್ಗೆ ನಮೂದಾಗಿದೆ ಎಂದು ಸೂಚಿಸಿದ್ದು ಸಾಕ್ಷಿಯು ಸರಿ ಎಂದು ಒಪ್ಪಿದ್ದಾರೆ. ನಿಪಿ 20 ಕ್ರಯ ಪತ್ರದ ಪ್ರಕಾರ ಸರ್ವೇ ನಂ 323 ಮತ್ತು 322 ರ ಪೂರ್ಣ ವಿಸ್ತೀರ್ಣವನ್ನು ಮಾರಾಟ ಮಾಡಲಾಗಿಲ್ಲ ಎಂದರೆ ಹೌದು, 10 ಎಕರೆ ಮಾತ್ರ ಮಾರಾಟ ಮಾಡಿದ್ದರು. ಸರ್ವೇ ನಂ. 323 ರಲ್ಲಿ 12 ಎಕರೆ 97 ಸೆಂಟ್ಸ್ ಮತ್ತು ಸರ್ವೇ ನಂ. 322 ರಲ್ಲಿ 96 ಸೆಂಟ್ಸ್ ಮಲ್ಲಪ್ಪ ತಂದೆ ಗುಂಡಪ್ಪ ಇವರ ಹೆಸರಿನಲ್ಲಿರುವುದನ್ನು ದುರುಪಯೋಗ ಮಾಡಿಕೊಂಡು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಉಪ್ಪಾರ ಮುದುಕಪ್ಪ ನಿಪಿ 20 ಕ್ರಯ ಪತ್ರದ ಮೂಲಕ ಮಾರಾಟ ಮಾಡಿರುವ ಜಮೀನುಗಳನ್ನು ನಾನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ಹಿಂದಿನ ದಾವೆ ಓ.ಎಸ್. ನಂ. 54/2013 ರಲ್ಲೂ ಈ ಎರಡು ಆಸ್ತಿಗಳನ್ನು ಸೇರಿಸಿರಲಿಲ್ಲ ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ. 1968 ರಿಂದಲೂ ಉಪ್ಪಾರ ಚೌಡಮ್ಮನ ಅಣ್ಣ

ಉಪ್ಪಾರ ಚೌಡಪ್ಪನ ಹೆಸರಿನಲ್ಲೇ ಉಪ್ಪಾರ ಮುದುಕಪ್ಪನ ಆಸ್ತಿಗಳ ಖಾತೆ ಮುಂದುವರೆಯುತ್ತಿದೆ ಎಂದರೆ ಉಪ್ಪಾರ ಮುದುಕಪ್ಪನಿಗೆ ಒಟ್ಟು 13 ಸರ್ವೇ ನಂಬರುಗಳಲ್ಲಿ ಆಸ್ತಿಗಳಿದ್ದವು. ಉಪ್ಪಾರ ಚೌಡಪ್ಪ ಕೇವಲ 6 ಸರ್ವೇ ನಂಬರುಗಳನ್ನು ಮಾತ್ರ ತನ್ನ ಹೆಸರಿಗೆ ಮಾಡಿಸಿಕೊಂಡಿದ್ದು ಬಾಕಿ 7 ಸರ್ವೇ ನಂಬರುಗಳು ವೀರಭದ್ರಪ್ಪ ಮತ್ತು ಭೀಮಪ್ಪನ ಹೆಸರಿನಲ್ಲಿ ಇರುತ್ತವೆ.

7. ದಿನಾಂಕ 25.06.1979 ರ ಕ್ರಯ ಪತ್ರದ ಪ್ರಕಾರ ಉಪ್ಪಾರ ಚೌಡಪ್ಪನು ಸ ನಂ.175 ಎ ರಲ್ಲಿ 2 ಎಕರೆ 80 ಸೆಂಟ್ಸ್ ಜಮೀನನ್ನು ಮಣಿಯಪ್ಪನವರ ಬಸಪ್ಪನಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ. ನಾನು ಹೇಳುತ್ತೇನೆ, ಸದರಿ ಆಸ್ತಿ ಚೌಡಪ್ಪನ ತಂದೆ ಮುದುಕಪ್ಪನ ಹೆಸರಿನಲ್ಲಿ ಇರುವಾಗ ಮತ್ತು ಮುದುಕಪ್ಪ ಬದುಕಿದ್ದಾಗಲೇ ಚೌಡಪ್ಪ ಮಾರಾಟ ಮಾಡಿದ್ದ. ಉಪ್ಪಾರ ಚೌಡಮ್ಮನಿಗೆ ಸದರಿ ಜಮೀನನ್ನು ಮಣಿಯಪ್ಪನವರ ಬಸಪ್ಪನಿಗೆ ಮಾರಾಟ ಮಾಡಿದ ವಿಚಾರ ಗೊತ್ತಿದೆ ಎಂದರೆ ಇತ್ತೀಚೆಗೆ ಗೊತ್ತಾಗಿದೆ. ಓ.ಎಸ್. ನಂ. 54/2013 ರಲ್ಲಿ ಉಪ್ಪಾರ ಚೌಡಪ್ಪ ಸದರಿ ದಾವಾ ಆಸ್ತಿಗಳು ಆತನ ತಂದೆಯಿಂದ ಆತನಿಗೆ ಬಂದಿದ್ದ ಆಸ್ತಿಗಳೆಂದು ಒಪ್ಪಿಕೊಂಡಿದ್ದ ಎಂದರೆ ಅದು ಸುಳ್ಳು. ನಾನೇ ಹಾಜರು ಮಾಡಿದ ನಿಪಿ 26 ಮ್ಯುಟೇಶನ್ ರಿಜಿಸ್ಟರ್ ಪ್ರಕಾರ ಉಪ್ಪಾರ ಮುದುಕಪ್ಪ ಮಾರಾಟ ಮಾಡಿ ಉಳಿದಿದ್ದ ಎಲ್ಲಾ ಆಸ್ತಿಗಳ ಖಾತೆ ಬದಲಾವಣೆ ಉಪ್ಪಾರ ಚೌಡಪ್ಪನ ಹೆಸರಿಗೆ ನಮೂದಾಗಿವೆ ಎಂದರೆ ಸರಿ. ಉಪ್ಪಾರ ಚೌಡಮ್ಮನಿಗೆ 1941 ನೇ ಇಸವಿಯಲ್ಲೇ ಉಪ್ಪಾರ ಚೌಡಪ್ಪ ಮತ್ತು ಆತನ ಸಹೋದರರು ಪಾಲುವಿಭಾಗ ಮಾಡಿಕೊಂಡಿದ್ದ ಬಗ್ಗೆ ಗೊತ್ತಿದ್ದರೂ ನಾನು ಉಪ್ಪಾರ ಮುದುಕಪ್ಪ ದಿನಾಂಕ 29.05.1941 ರಂದು ಮಾಡಿದ ಕ್ರಯ ಪತ್ರ ವಂಚನೆಯಿಂದ ಕೂಡಿದ ಕ್ರಯ ಪತ್ರವೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಉಪ್ಪಾರ ಮುದುಕಪ್ಪ ತನ್ನ ಜೀವಿತಾವಧಿಯಲ್ಲಿ ದಿನಾಂಕ 29.05.1941 ರ ಕ್ರಯ ಪತ್ರ ಮೋಸದಿಂದ ಕೂಡಿದೆ ಎಂದು ಕಾನೂನಿನ ಕ್ರಮ ತೆಗೆದುಕೊಂಡಿದ್ದರೇ ಎಂದರೆ ಇಲ್ಲ. ವಾದ ಪತ್ರದಲ್ಲಿ ಗುಂಡಪ್ಪನ ಮಗ ಮಲ್ಲಪ್ಪನಿಗೆ ವಾದಿಯ ಜೊತೆ ಯಾವುದೇ ಸಂಬಂಧವಿಲ್ಲವೆಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ವಾದಿ ಉಪ್ಪಾರ ಚೌಡುಮ್ಮ, ಆಕೆಯ ಅಣ್ಣ ಉಪ್ಪಾರ ಚೌಡಪ್ಪ ಮತ್ತು ಆತನ ಸೊಸೆಯಾದ ನಾನು ಶಾಮೀಲಾಗಿ ಕಂದಾಯ ಅಧಿಕಾರಿಗಳಿಂದ ಸುಳ್ಳು ದಾಖಲೆಗಳನ್ನು ಸೃಷ್ಟಿಸಿಕೊಂಡು ಹಾಜರು ಮಾಡಿದ್ದೇವೆ ಎಂದರೆ ಸರಿಯಲ್ಲ. ನಾನು ಹಾಜರು ಮಾಡಿದ ನಿಪಿ 60 ಮತ್ತು ನಿಪಿ 63 ರಂತೆ ಹಿಂಬರಹಗಳನ್ನು ನೀಡುವ ಅಧಿಕಾರ ಕಂದಾಯ ಅಧಿಕಾರಿಗಳಿಗೆ ಇರುವುದಿಲ್ಲ ಎಂದರೆ ಸರಿಯಲ್ಲ. 1968 ರಲ್ಲಿ ಪಹಣಿ ನಮೂದಾತಿ ಪ್ರಾರಂಭವಾದ ನಂತರ ಯಾರು ಸಾಗುವಳಿ ಮಾಡುತ್ತಾರೋ ಅವರ ಹೆಸರುಗಳನ್ನು ಪಹಣಿಗಳಲ್ಲಿ ನಮೂದು ಮಾಡುತ್ತಿದ್ದರು ಎಂದರೆ ಸರಿ.

**(ಮುಂದುವರೆದ ಪಾಟೀಸವಾಲಿಗೆ ಸಮಯ ಕೋರಿದ್ದರಿಂದ ಮುಂದೂಡಿತು).**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ).

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಹೂವಿನ ಹಡಗಲಿ.**